ಹುಬ್ಬಳ್ಳಿ - ಧಾರವಾಡ ಮಹಾನಗರ ಪಾಲಿಕೆಯ ಸಮಗ್ರ ಅಭಿವೃದ್ಧಿ ಕುರಿತು

4751 - ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲು ವಿಶ್ವಬ್ಯಾಂಕ್ ನೆರವು ಪಡೆಯುವ ವಿಚಾರ ಸರ್ಕಾರದ ಗಮನದಲ್ಲಿದೆಯೇ ?*

ಆ) *ವಿಶ್ವ ಬ್ಯಾಂಕಿನಿಂದ ಹಣಕಾಸು ನೆರವು ಪಡೆಯಲಿಕ್ಕಾಗಿ ಸರ್ಕಾರ ಈವರೆಗೆ ಕೈಗೊಂಡ ಕ್ರಮವೇನು ?*

ಇ) *ಹಾಗಿಲ್ಲದಿದ್ದಲ್ಲಿ ಕಾರಣವೇನು ?*

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಹುಬ್ಬಳ್ಳಿ ಧಾರವಾಡ ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆ

4753 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಹುಬ್ಬಳ್ಳಿ-ಧಾರವಾಡ ಅವಳಿ ನಗರಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ ರೂಪಿಸುವ ಪ್ರಸ್ತಾಪ ಸರ್ಕಾರದ ಮುಂದೆ ಇದೆಯೆ ?*

ಆ) *ಹಾಗಿದ್ದಲ್ಲಿ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು ಮತ್ತು ಯೋಜನೆಯ ಸಂಪೂರ್ಣ ವಿವರಗಳನ್ನು ನೀಡುವುದು.*

ಇ) *ಈ ಯೋಜನೆ ಕಾರ್ಯರೂಪ ಬಂದರೆ ಹುಬ್ಬಳ್ಳಿ-ಧಾರವಾಡ ಅವಳಿ ನಗರಕ್ಕೆ ಅಗತ್ಯ ನೀರು ಪೂರೈಕೆಯಾಗುತ್ತದೆಯೆ ?*

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗಾರಭಿವೃದ್ಧಿ ಸಚಿವರು) :

ಅ) ಇದೆ.

ಆ) ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಿಗೆ ಮಲಪ್ರಭಾ ಜಲಾಶಯವನ್ನು ಮೂಲವಾಗಿಟ್ಟುಕೊಂಡು 3ನೇ ಹಂತದ ನೀರು ಸರಬರಾಜು ಯೋಜನೆಗೆ ವಿವರವಾದ ಅಂದಾಜು ಸರ್ಕಾರದ ಪರಿಶೀಲನೆಯಲ್ಲಿದೆ. ಈ ಯೋಜನೆಯನ್ನು 2009ರ ಇಸವಿಯಲ್ಲಿ ಇರಬಹುದಾದ ಜನ ಸಂಖ್ಯೆ 9.00

ಲಕ್ಷಕ್ಕೆ 63 ದಶ ಲಕ್ಷ ಲೀಟರ್ ಹಾಗೂ 2021ರಲ್ಲಿ ಇರಬಹುದಾದ 12.5 ಲಕ್ಷ ಜನಸಂಖ್ಯೆಗೆ 135 ದಶಲಕ್ಷ ಲೀಟರ್ ಅಧಿಕ ನೀರನ್ನು ಸರಬರಾಜು ಮಾಡಲು ಯೋಜಿಸಲಾಗಿದ್ದು, ಈ ಯೋಜನೆ ಪೂರ್ಣಗೊಂಡ ನಂತರ ದಿನಂಪ್ರತಿ ಪ್ರತಿಯೊಬ್ಬರಿಗೆ 135 ಲೀಟರ್ ನೀರನ್ನು ಸರಬರಾಜು ಮಾಡಬಹುದಾಗಿದೆ.

ಇ) ಹೌದು.

ಮೈಸೂರು ಬತ್ತನೆ ಗೂಡಿಗೆ ಬೋನಸ್

4754 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಬತ್ತನೆ ವಲಯದಲ್ಲಿ ಉತ್ಪಾದಿಸಿರುವ ಮೈಸೂರು ಬತ್ತನೆ ಗೂಡಿಗೆ ಬೋನಸ್ ನೀಡುವ ಯೋಜನೆಗೆ ಯಾವಾಗಿನಿಂದ ಜಾರಿಗೆ ಬಂದಿದೆ?

ಆ) ಕಳೆದ 3 ವರ್ಷಗಳಲ್ಲಿ ಯಾವ ಯಾವ ಮಾರುಕಟ್ಟೆಯಲ್ಲಿ ಎಷ್ಟೆಷ್ಟು ಮೊತ್ತದ ಬೋನಸ್ ನೀಡಲಾಗಿದೆ? ಎಷ್ಟು ಜನ ರೈತರಿಗೆ ಬೋನಸ್ ನೀಡಲಾಗಿದೆ?

ಶ್ರೀ ಎಂ. ಮಹಾದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ದಿನಾಂಕ : 1-8-1982 ರಿಂದ ಜಾರಿಗೆ ಬಂದಿದೆ.

ಆ) ಕಳೆದ 3 ವರ್ಷಗಳಲ್ಲಿ ಮೈಸೂರು ಬತ್ತನೆ ವಲಯದ ಮಾರುಕಟ್ಟೆಗಳಲ್ಲಿ ಬತ್ತನೆ ವಲಯದ ಮಾರುಕಟ್ಟೆಗಳಲ್ಲಿ ಪಾವತಿಸಲಾಗಿರುವ ಬೋನಸ್ ಹಣ ಹಾಗೂ ಬೆಳೆಗಾರರ ಸಂಖ್ಯೆಯ ವಿವರಗಳನ್ನು ಲಗತ್ತಿಸಿದ ಅನುಬಂಧ-1 ರಲ್ಲಿ ನೀಡಲಾಗಿದೆ.

ಅನುಬಂಧ - 1

1997-98 ರಿಂದ ಮೂರು ವರ್ಷಗಳಲ್ಲಿ ಮೈಸೂರು ಬತ್ತನೆ ಪ್ರದೇಶದ ಮಾರುಕಟ್ಟೆಗಳಲ್ಲಿ ರೈತರಿಗೆ ನೀಡಿರುವ ಬೋನಸ್ ವಿವರ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಗೂಡಿನ ಮಾರುಕಟ್ಟೆಯ ಹೆಸರು	1997-98		1998-99		1999-2000	
		ಪಾವತಿಸಿದ ಹಣ	ಬೆಳೆಗಾರರು	ಪಾವತಿಸಿದ ಹಣ	ಬೆಳೆಗಾರರು	ಪಾವತಿಸಿದ ಹಣ	ಬೆಳೆಗಾರರು
1.	ಕುಣಿಗಲ್	20.19	4059	10.97	2409	19.28	3712
2.	ಹೆಬ್ಬೂರು	12.49	3447	10.69	3040	04.05	1081
3.	ಕೆಂಪನಹಳ್ಳಿ	15.86	2050	13.54	1667	16.44	1933